# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು.

**ಸಿ.ಸಿ. 776/2024**

ಫಿರ್ಯಾದುದಾರರುಃ ಸರ್ಕಾರದ ಪರ ಹುಣಸೂರು ಪಟ್ಟಣ ಪೊಲೀಸ್ ಠಾಣೆ,
ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿಗಳುಃ
1. ದಿನೇಶ ಬಿನ್ ಸಣ್ಣಯ್ಯ,
ವಯಸ್ಸು 37 ವರ್ಷ.

2. ವಿಜಯ ಕುಮಾರ ಬಿನ್ ಸಣ್ಣಯ್ಯ,
ವಯಸ್ಸು 35 ವರ್ಷ.

3. ಚಂದ್ರ ಬಿನ್ ಸಣ್ಣಯ್ಯ,
ವಯಸ್ಸು 41 ವರ್ಷ,
ಎಲ್ಲರ ವಾಸಃ ರಂಗನಾಥ ಬಡಾವಣೆ,
ಕಲ್ಕುಣಿಕೆ, ಹುಣಸೂರು ಟೌನ್
ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀಮತಿ. ಜೈಬುನ್ನಿಸಾ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ**

ದಿನಾಂಕ 02.12.2023 ರಂದು ಬೆಳಗ್ಗೆ 7.45 ಗಂಟೆಯ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ ರಂಗನಾಥ ಬಡಾವಣೆಯಲ್ಲಿ 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-1 ರವರನ್ನು ಉದ್ದೇಶಿಸಿ ಬೋಳಿ ಮಗನೇ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 1ನೇ ಆರೋಪಿಯಾದ ನೀವು ಸಾಕ್ಷಿ-1ರವರನ್ನು ನಮ್ಮ ಮನೆಯ ಹತ್ತಿರ ಬಂದು ನಮ್ಮ ತಾಯಿಯವರ ಜೊತೆಯಲ್ಲಿ ಗಲಾಟೆ ಮಾಡಿದ್ದಿರಾ ತಾಕತ್ ಇದ್ದರೆ ನನ್ನ ಜೊತೆ ಜಗಳಕ್ಕೆ ಬಾ ಎಂದು ಸಾಕ್ಷಿ-1ರವರ ಕುತ್ತಿಗೆ ಪಟ್ಟಿಯನ್ನು ಹಿಡಿದುಕೊಂಡು ಮುಂದೆ ಹೋಗದಂತೆ ತಡೆಹಿಡಿದು ನಿಲ್ಲಿಸಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 341 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 2ನೇ ಆರೋಪಿಯಾದ ನೀವು ಸಾಕ್ಷಿ-1ರವರನ್ನು ಬಿಡಿಸಿಕೊಳ್ಳಲು ಬಂದ ಸಾಕ್ಷಿ-2ರವರನ್ನು ತಳ್ಳಿ ಕೆಳಕ್ಕೆ ಬಿಳಿಸಿ ಬಲಕೈಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮತ್ತೊಮ್ಮೆ ನೀವುಗಳು ನಮ್ಮ ತಂಟೆ –ತಕರಾರಿಗೆ ಬಂದರೆ ಮುಗಿಸದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆಯನ್ನು ಹಾಕಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಗಳು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ಜೈಬುನ್ನಿಸಾ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹುಣಸೂರು.